ವರದಿ ಬಗ್ಗೆ ಹೇಳಿದ್ದಾರೆ. ಆ ವರದಿ ಸರ್ಕಾರಕ್ಕೆ ಬಂದಿಲ್ಲ. ಅದನ್ನು ನಾನು ತರಿಸಿಕೊಂಡು ಅದರಲ್ಲಿ ಏನು ಸಲಹೆಯನ್ನು ಸೂಚಿಸಿದ್ದಾರೆ ಅದನ್ನು ಗಮನದಲ್ಲಿ ಇಟ್ಟುಕೊಂಡು ಸಾಧ್ಯವಾದಷ್ಟು ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಮೈಸೂರಿನಲ್ಲಿ ಇರತಕ್ಕ ಓರಿಯಂಟಲ್ ಇನ್‌ಸ್ಟಿಟ್ಯೂಟ್ 90 ವರ್ಷ ಗಳಷ್ಟು ಹಳೆಯದಾಗಿದ್ದು ಅಲ್ಲಿ 141 ಸಂಸ್ಕೃತ ಗ್ರಂಥಗಳನ್ನು ಸಂಶೋಧನೆ ಮಾಡಲಾಗಿದೆ. 1 ವರ್ಷಕ್ಕೆ 1 ಲಕ್ಷ ರೂಪಾಯಿ ಖರ್ಚುಮಾಡಿ 6 ಗ್ರಂಥಗಳನ್ನು ಮೈಸೂರಿನ ಓರಿಯಂಟಲ್ ಇನ್ಸ್ಟಿಟ್ಯೂಟ್ ಹೊರತಂದಿದೆ. ಆದರೆ ಸಂಸ್ಕೃತ ರೀಸರ್ಚ್ ಇನ್‌ಸ್ಟಿಟ್ಯೂಟ್, ಮೇಲುಕೋಟೆ–31 ಲಕ್ಷ ಖರ್ಚು ಮಾಡಿ ಮೂರೂವರೆ ಗ್ರಂಥಗಳನ್ನು ತಂದಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಏನು ಸಲಹೆಯನ್ನು ಕೊಟ್ಟಿದ್ದಾರೆ ಅದನ್ನು ಪರಿಶೀಲನೆ ಮಾಡಿ ಅದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದು ಕೊಳ್ಳುತ್ತೇನೆ. ಆ ವರದಿ ತರಿಸಿಕೊಂಡು ಏನು ಒಳ್ಳೆಯದನ್ನು ಮಾಡಬೇಕೋ ಆ ಬಗ್ಗೆ ಆಲೋಚನೆ ಮಾಡುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಸರ್ಕಾರ ಈ ಬಗ್ಗೆ ಒಂದು ಎನ್‌ಕ್ವೈರಿ ಕಮಿಟಿ ಮಾಡಿ ತನಿಖೆ ಮಾಡಿಸಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಕೂಡಾ ಕಂದಾಯ ಮಂತ್ರಿಯಾಗಿದ್ದಾಗ ಮೇಲುಕೋಟೆಗೆ ಹೋಗಿ ಬಂದಿದ್ದೇನೆ. ಮಾನ್ಯ ಮಂತ್ರಿಗಳು ಮೇಲುಕೋಟೆಗೆ ಹೋಗದೇ ಇದ್ದರೆ ಒಂದು ಬಾರಿ ಹೋಗಿ ಬರಲಿ, ಅಲ್ಲಿಗೆ ಹೋಗಿ ವಿಷಯವನ್ನು ಸೂಕ್ಷ್ಮವಾಗಿ ನೋಡಿ ಬನ್ನಿ. ಮೇಲುಕೋಟೆಯಲ್ಲಿ ಸಾರ್ವಜನಕರಿಗೆ ಅನುಕೂಲಗಳು ಇಲ್ಲ. ಅಲ್ಲಿಗೆ ಎಲ್ಲರೂ ಹೋಗುವುದಕ್ಕಾಗುವುದಿಲ್ಲ ಆದುದರಿಂದ ತಾವು ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ಸೂಕ್ತ. ಇಲ್ಲಿಗೆ ಹೆಚ್ಚು ಹಣ ಕೊಡಬೇಕೆಂದು ನಾನು ಇದ್ದಾಗಲೂ ನಿವೇದನೆ ಇತ್ತ. ನಾನೂ ಅಲ್ಲಿಗೆ ಹೋಗಿ ಪರಿಶೀಲನೆ ಮಾಡಿ ಯೋಗಕ್ಷೇಮ ನೋಡಿ ಕೊಂಡು ಬಂದೆ ಅಲ್ಲಿ ಕೆಲವು ಸ್ವಾರ್ಥಿಗಳು ಕುಳಿತುಕೊಂಡು ದುಡ್ಡು ಒಡೆಯುವುದಕ್ಕೆ ಯೋಜನೆ ಹಾಕಿದ್ದಾರೆ. ಸರ್ಕಾರದಲ್ಲೂ ಆ ಕಾಲದಲ್ಲಿ ಕೆಲವರು ಅಂತಹವರು ಇದ್ದರು. ನಾನು ಅಧಿಕಾರದಲ್ಲಿ ಇದ್ದಾಗ ಅಲ್ಲಿಗೆ ಮೂರೂ ಕಾಸೂ ಕೊಡಲಿಲ್ಲ. ನಾನು ಬಿಟ್ಟ ಮೇಲೆ ಹಣ ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳು ಅಲ್ಲಿಗೆ ಹೋಗಿ ಪರಿಶೀಲನೆ ಮಾಡಿ ಬಂದಮೇಲೆ ಮಾನ್ಯ ಹೆಮ್ಮಿಗೆಯವರು ಏನು ವಿಷಯ ಇಟ್ಟಿದ್ದಾರೆ ಅದನ್ನು ಸಮರ್ಥನೆ ಮಾಡಬೇಕಾಗುತ್ತದೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ —ಆದಷ್ಟು ಬೇಗ ತನಿಖೆ ಮಾಡಿ ಅಲ್ಲಿಗೆ ಭೇಟಿ ಕೊಡುತ್ತೇನೆ.

(2) ರಾಜಾಜಿನಗರದ ಜನರಿಗೆ ಕುಡಿಯುವ ನೀರಿನ ಅಭಾವ

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ) —ಅಧ್ಯಕ್ಷರೆ, ರಾಜಾಜಿನಗರದ ಜನತೆಯ ಮತ್ತು ಬೆಂಗಳೂರಿನ ಜನತೆಯ ಕುಡಿಯುವ ನೀರಿನ ಅಭಾವದ ವಿಷಯವಾಗಿ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಕೆಳಕಂಡ ಹೇಳಿಕೆಯನ್ನು ಮಾಡುತ್ತೇನೆ.

ರಾಷ್ಟ್ರೀಯ ಮೌಲ್ಯಮಾಪನದನ್ವಯ, ಕೈಗಾರಿಕೆಗಳ ನೀರಿನ ಅವಶ್ಯಕತೆಯನ್ನು ಪೂರೈಸಿದ ನಂತರ ನಗರದ ಪ್ರಸ್ತುತ ಜನ ಸಂಖ್ಯೆಗೆ ದಿನಂಪ್ರತಿ 980 ದಶಲಕ್ಷ ಲೀಟರ್ ನೀರು ಸರಬರಾಜಾಗ ಬೇಕಾಗಿದೆ. ಆದರೆ ಸಾಮಾನ್ಯ ಸ್ಥಿತಿಯಲ್ಲಿ ಆರ್ಕಾವತಿ ಹಾಗೂ ಕಾವೇರಿ ಮೂಲದಿಂದ ನಗರಕ್ಕೆ 425 ದಶಲಕ್ಷ ಲೀಟರ್ ದಿನಂ ಪ್ರತಿ ನೀರು ಸರಬರಾಜಾಗುತ್ತಿದ್ದು ಅವುಗಳ ವಿವರ ಈ ಕೆಳಕಂಡಂತಿದೆ :—

ಆರ್ಕಾವತಿ ಮೂಲ	ಹೆಸರ ಘಟ್ಟ	15 ದಶ ಲಕ್ಷ ಲೀಟರ್
	ತಿಪ್ಪಗೊಂಡನಹಳ್ಳಿ	140 ದಶ ಲಕ್ಷ ಲೀಟರ್
ಕಾವೇರಿ 1 ಮತ್ತು 2ನೇ ಹಂತ		270 ದಶ ಲಕ್ಷ ಲೀಟರ್
		ಒಟ್ಟು 425 ದಶ ಲಕ್ಷ ಲೀಟರ್‌ಗಳು.

ಕಳೆದ ಕೆಲವು ವರ್ಷಗಳ ಮಳೆಯ ವಿಫಲತೆಯಿಂದಾಗಿ, ಹೆಸರ ಘಟ್ಟ ಜಲಾಶಯವು ಜನವರಿ 1985ರಲ್ಲೇ ಪೂರ್ಣವಾಗಿ ಬತ್ತಿಹೋಗಿದೆ. ಪೀಣ್ಯ ಹೆಚ್.ಎಂ.ಟಿ, ಟೌನ್‌ಷಿಪ್, ಏರ್‌ಫೋರ್ಸ್ ಸ್ಟೇಷನ್ ಜಾಲಹಳ್ಳಿ ಹಾಗೂ ಇತರ ಬೇಡಿಕೆಗಳನ್ನು ಪೂರೈಸಲು ನಗರದಿಂದ 5 ದಶಲಕ್ಷ ಲೀಟರ್ ನೀರನ್ನು ದಿನಂಪ್ರತಿ ಸರಬರಾಜು ಮಾಡಲಾಗುತ್ತಿದೆ.

ಹುಳೆಯ ವಿಫಲತೆಯಿಂದಾಗಿ, ತಿಪ್ಪಗೊಂಡನ ಹಳ್ಳಿ ಜಲಾಶಯದ ನೀರಿನ ಶೇಖರಣೆಯು ತೀವ್ರವಾಗಿ ಕಡಿಮೆಯಾಗಿದ್ದು, ನಗರಕ್ಕೆ ಈ ಮೂಲದಿಂದ ದಿನಂಪ್ರತಿ ಬರಬೇಕಾಗಿದ್ದ 140 ದಶ ಲಕ್ಷ ಲೀಟರ್ ನೀರು ಸರಬರಾಜಿನಿಂದ ಸಧ್ಯಕ್ಕೆ 45 ದಶ ಲಕ್ಷ ಲೀಟರ್ ಇಳಿಸಲಾಗಿದೆ. ಈ ಎಲ್ಲ ಮೂಲಗಳಿಂದ ದಿನಂ ಪ್ರತಿ 270 ದಶ ಲಕ್ಷ ಲೀಟರ್ ನೀರು ಬರುತ್ತದೆ. ತಿಪ್ಪಗೊಂಡನಹಳ್ಳಿ ಜಲಾಶಯದಲ್ಲಿನ ನೀರಿನ ಮಟ್ಟ 25-7-1985ರಂದು 1 ಅಡಿ 10½ಅಂಗುಲ ಇರುತ್ತದೆ. ಈ ಜಲಾಶಯಕ್ಕೆ ಮತ್ತೆ ಜಲಾಗಮನವಾಗದಿದ್ದಲ್ಲಿ, ಪ್ರಸ್ತುತ ಶೇಖರಣೆಯು ಜುಲೈ ಮಾಹೆ ಆಂತ್ಯದವರೆಗೂ ಮಾತ್ರ ಬರುವುದು. ಮುಂಗಾರು ಮಳೆ ಪ್ರಾರಂಭವಾಗಿರುವುದರಿಂದ ಜಲಾಶಯಕ್ಕೆ ಸ್ವಲ್ಪ ಸ್ವಲ್ಪವಾಗಿ ಜಲಾಗಮನವಾಗುತ್ತಿದ್ದು, ನೀರಿನ ಬಳಕೆ ಎಷ್ಟು ದಿನ ಬರಬಹುದೆಂದು ನಿಖರವಾಗಿ ಹೇಳಲಾಗದು. ದಿನಂ ಪ್ರತಿ ಈ ಜಲಾಶಯದಿಂದ 3ರಿಂದ 4 ಅಂಗುಲ ನೀರನ್ನು ಪಡೆಯಲಾಗುತ್ತಿದೆ.

ಕಳೆದ ಐದು ವರ್ಷಗಳ ಜನವರಿಯಿಂದ ಜೂನ್‌ವರೆಗಿನ ತಿಪ್ಪಗೊಂಡನಹಳ್ಳಿ ಜಲಾಶಯದ ಜಲಾಗಮನದ ವಿವರಗಳು ಈ ಕೆಳಕಂಡಂತಿದೆ :

(ದಶ ಲಕ್ಷ ಘನ ಅಡಿಗಳಲ್ಲಿ)

ಮಾಹೆ	1981	1982	1983	1984	1985
ಜನವರಿ	16.41	19.18	29.95	--	--
ಫೆಬ್ರುವರಿ	13.41	7.46	32 52	—	—
ಮಾರ್ಚ್	50.40	5.80	40.30	111.48	10.00
ಏಪ್ರಿಲ್	115.74	9.62	—	7.57	16.49
ಮೇ	158.77	49,66	157.08	101.99	20.22
ಜೂನ್	52.02	63·64	317.99	6.14	16.35
ಜುಲೈ	53.16	75.76	20.22	158 60	27.22 (24-7-85ರ ವರೆಗೆ)

ಈ ಜಲಾಶಯದಿಂದ ಕನಿಷ್ಟ ಮಟ್ಟದ ಕೆಳಕಡೆಯಿಂದಲೂ ನೀರನ್ನು ಕೆಲವು ಕಾಮಗಾರಿಗಳನ್ನು ನಿಯೋಗಿಸಲಾಗಿದೆ.

ಕೊಳವೆ ಭಾವಿ.—1985ರಲ್ಲಿ ಮಂಡಳಿಯು ಈವರೆವಿಗೆ 264 ಕೊಳವೆ ಭಾವಿಗಳನ್ನು ಕೊರೆಯಿಸಿದ್ದು, ಒಟ್ಟಾರೆ 412 ಕೊಳವೆ ಭಾವಿಗಳಿವೆ. ಇವುಗಳಲ್ಲಿ 22 ಭಾವಿಗಳು ಸಂಪೂರ್ಣ ವಿಫಲವಾಗಿದ್ದು ಪ್ರತಿ ಗಂಟೆಗೆ 2000 ಗ್ಯಾಲನ್‌ಗಿಂತಲೂ ಹೆಚ್ಚು ಇಳುವರಿ ನೀಡುತ್ತಿರುವ 14 ಭಾವಿಗಳಿಗೆ ವಿದ್ಯುತ್ ಪಂಪ್ ಅಳವಡಿಸಲಾಗುವುದು. ಈಗ ಎಲ್ಲಾ ಭಾವಿಗಳಿಗೂ ಕೈಪಂಡ್ ಅಳವಡಿಸಲಾಗಿದೆ. ಅದ್ಯತ ಮೇರೆಗೆ ಭಾವಿಗಳನ್ನು ರಿಪೇರಿ ಮಾಡುವ ಸಲುವಾಗಿ, ಒಂದು ನಿರ್ವಹಣಾ ಉಪ ವಿಭಾಗವನ್ನು ತೆರೆಯಲಾಗಿವೆ.

ರಾಜಾಜಿನಗರ ಕ್ಷೇತ್ರದಲ್ಲಿ ಈಗಾಗಲೇ 83 ಕೊಳವೆ ಭಾವಿಗಳನ್ನು ಗಾಂಧೀನಗರ ಕ್ಷೇತ್ರದಲ್ಲಿ 34 ಭಾವಿಗಳನ್ನು ಬಿನ್ನಿಪೇಟೆ ಕ್ಷೇತ್ರದಲ್ಲಿ 55 ಕೊಳವೆ ಭಾವಿಗಳನ್ನು ಕೊರಸಲಾಗಿದೆ.

ನಗರದ ಮೂರನೆ ಎರಡು ಭಾಗವು ಕಾವೇರಿ ನೀರು ಸರಬರಾಜನ್ನೊಳಗೊಂಡಿದ್ದು, ಉಳಿದ ಮೂರನೇ ಒಂದು ಭಾಗವಾದ ನಗರದ ಉತ್ತರ ಮತ್ತು ವಾಯುವ್ಯ ಭಾಗದ ಪ್ರದೇಶಗಳಿಗೆ ಅರ್ಕಾವತಿ ನೀರು ಸರಬರಾಜಾಗುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಮಳೆಯ ವಿಫಲತೆಯಿಂದಾಗಿ ಉದ್ಭವಿಸಿರುವ ನೀರಿನ ಅಭಾವದ ಪ್ರಯುಕ್ತ, ನಗರದ ಕೆಲವು ಪ್ರದೇಶಗಳಾದ ರಾಜಾಜಿನಗರ, ವೆಸ್ಟ್ ಆಫ್ ಕಾರ್ಡ್ ರೋಡ್, ಶ್ರೀರಾಂಪುರ. ಮಾಗಡಿ ರಸ್ತೆ, ಹಾಗೂ ಮಲ್ಲೇಶ್ವರಗಳನ್ನು ಬಿಟ್ಟು ನಗರದ ಉಳಿದೆಲ್ಲಾ ಭಾಗಗಳಿಗೂ ಕಾವೇರಿ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಪ್ರಸ್ತುತ ಈ ಪ್ರದೇಶಗಳಿಗೂ ಕಾವೇರಿ ನೀರನ್ನು ಸರಬರಾಜು ಮಾಡಲು ಸಿರಸಿ ವೃತ್ತದಿಂದ ಮಾಗಡಿ ರಸ್ತೆ ಮೇಲ್ಮಟ್ಟದ ಜಲಾಶಯಕ್ಕೆ 400 ಮಿ.ಮೀ. ವ್ಯಾಸದ ಕೊಳವೆಯನ್ನು ಸುಮಾರು 20 ಲಕ್ಷ ರೂ ವೆಚ್ಚದಲ್ಲಿ ಹಾಕಲು ಯೋಚಿಸಲಾಗಿದೆ. ಈ ದಿಸೆಯಲ್ಲಿ, ಅಗತ್ಯವಾದ ಕ್ರಮವನ್ನು ತೆಗೆದುಕೊಂಡಿದ್ದು, ಈ ಕೆಲಸವು ಸುಮಾರು 6 ವಾರಗಳಲ್ಲಿ ಮುಗಿಸುವ ಆಶಯವಿದೆ, ಇದರ ಜೊತೆಗೆ, ಅರ್ಕಾವತಿ ಪ್ರದೇಶಗಳಾದ ರಾಜಾಜಿನಗರ, ಬಸವೇಶ್ವರ ನಗರ ಹಾಗೂ ಶ್ರೀರಾಂಪುರಗಳನ್ನು ಶಾಶ್ವತವಾಗಿ ಕಾವೇರಿ ಸರಬರಾಜಿನ ಚೌಕಟ್ಟಿನಲ್ಲಿ ತರಲು ಸೌತ್ ಎಂಡ್ ಸರ್ಕಲ್ಲಿನಿಂದ ಕೆತಮಹಾನಹಳ್ಳಿ ಭೂ

ಮಟ್ಟದ ಜಲಾಶಯಕ್ಕೆ 900 ಮಿ.ಮೀ ವ್ಯಾಸದ ಕೊಳವೆಯನ್ನು ಸುಮಾರು 400 ಲಕ್ಷ ರೂ.ಗಳ ವೆಚ್ಚದಲ್ಲಿ ಯೋಜಿಸಲಾಗಿದೆ, ಮಂಡಳಿಯು, ಈ ಕೆಲಸಕ್ಕೆ ಬೇಕಾಗುವ ಆರ್ಥಿಕ ಮೂಲವನ್ನು ಪರಿಶೀಲಿಸುತ್ತಿದೆ. ಈ ಕೆಲಸವು ಪ್ರಾರಂಭಗೊಂಡಂದಿನಿಂದ ಸುಮಾರು ಒಂದೂವರೆ ವರ್ಷಗಳಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಬಹಳ ಗಂಭೀರವಾಗಿದೆ ಎಂಬುದು ಮಾನ್ಯ ಸಚಿವರ ಉತ್ತರದಿಂದ ಸ್ಪಷ್ಟವಾಗಿ ಕಂಡುಬರುತ್ತಿದೆ. ಅದರಲ್ಲೂ ರಾಜಾಜಿನಗರ, ಸ್ವಲ್ಪಮಟ್ಟಿಗೆ ಮಲ್ಲೇಶ್ವರಂ, ಮಾನ್ಯ ಸದಸ್ಯರಾದ ನಾರಾಯಣ ಕುಮಾರ್‌ರವರ ಕ್ಷೇತ್ರವಾದ ಬಿನ್ನಿಪೇಟೆ ಈ ಪ್ರದೇಶಗಳಲ್ಲಿ ಬಹಳ ತೀವ್ರವಾದ ಪರಿಸ್ಥಿತಿ ಇದೆ. ನನ್ನ ಕ್ಷೇತ್ರದಲ್ಲಿ ರಾತ್ರಿ 12 ಗಂಟೆಯಿಂದ ಬೆಳಿಗ್ಗೆ 4 ಗಂಟೆಯವರೆಗೂ ಹೆಂಗಸರು ಮಕ್ಕಳು ಬಕೆಟ್, ಬಿಂದಿಗೆಗಳನ್ನು ಹಿಡಿದು ಕೊಂಡು ನೀರಿಗಾಗಿ ಅಲೆದಾಟ ಮಾಡಬೇಕಾಗಿದೆ. ರಾಜಾಜಿನಗರ ಮತ್ತು ಮಲ್ಲೇಶ್ವರದ ಕೆಲವು ಭಾಗಗಳಿಗೆ ಕಾವೇರಿ ನೀರು ಬರುವುದಿಲ್ಲ. ಇಲ್ಲಿಗೆ ತಿಪ್ಪಗೊಂಡನಹಳ್ಳಿಯಿಂದ ನೀರು ಬರಬೇಕಾಗಿದೆ. ಆದ್ದರಿಂದ ಈ ಕುಡಿಯುವ ನೀರಿನ ಸಮಸ್ಯೆಯನ್ನು ಯುದ್ಧದ ರೀತಿಯಲ್ಲಿ ಎದುರಿಸುವ ಕಾರ್ಯಕ್ರಮವನ್ನು ಸರ್ಕಾರ ಕೈಗೊಳ್ಳಬೇಕಾಗಿದೆ. ಈಗ ಆರ್ಕಾವತಿ ನೀರು ಎಲ್ಲೆಲ್ಲಿ ಬರುತ್ತಿದೆ ಈ ಪ್ರದೇಶಕ್ಕೆಲ್ಲಾ ಕಾವೇರಿ ನದಿ ನೀರನ್ನು ಒದಗಿಸಬೇಕಾಗಿದೆ : ಇದಕ್ಕಾಗಿ 400 ಮಿ. ಮೀಟರ್ ವ್ಯಾಸದ ಕೊಳವೆಯನ್ನು ಸುಮಾರು 20 ಲಕ್ಷ ರೂಪಾಯಿ ವೆಚ್ಚದಲ್ಲಿ ಹಾಕಲು ಯೋಚಿಸಲಾಗಿದೆಯೆಂದು ತಾವು ಹೇಳುತ್ತಿದ್ದೀರಿ. ಈ ಪೈಪಿನ ಕೆಪ್ಯಾಸಿಟಿ ಎಷ್ಟು ಎಂಬುದನ್ನು ತಾವು ಹೇಳಬೇಕು. ಈ ಕೊಳವೆಯನ್ನು ಹಾಕಿದರೂ ಕೂಡ ರಾಜಾಜಿನಗರ, ಬಿನ್ನಿಪೇಟೆ, ಮಲ್ಲೇಶ್ವರಗಳಿಗೆ ಯಾವುದೇ ಅನುಕೂಲವು ಆಗುವುದಿಲ್ಲ. ಈಗ 400 ಮಿ. ಮೀ ಕೊಳವೆಯನ್ನು ಹಾಕತಕ್ಕ ಜವಾಬ್ದಾರಿ ಸರ್ಕಾರದ್ದು. ಈ ಕೆಲಸ ಪ್ರಾರಂಭವಾದಂದಿನಿಂದ ಸುಮಾರು ಒಂದುವರೆ ವರ್ಷಗಳಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಇದೆಯೆಂದು ತಾವು ಹೇಳುತ್ತಿದ್ದೀರಿ. ನಾನಾದರೂ ತಮ್ಮನ್ನು ಕೇಳುತ್ತೇನೆ, ತಾವು ಯಾವಾಗ ಈ ಕೆಲಸವನ್ನು ಪ್ರಾರಂಭ ಮಾಡುತ್ತೀರಿ ? ನಿಮ್ಮ ಲೆಕ್ಕದಲ್ಲಿ ಒಂದೂವರೆ ವರ್ಷ ಎಂದರೆ ನಾಲ್ಕು ವರ್ಷವಾಗುತ್ತದೆ. ಅದುವರೆಗೂ ಕುಡಿಯುವ ನೀರಿಗಾಗಿ ಬವಣೆಪಡುತ್ತಿರುವ ಈ 3–4 ಪ್ರದೇಶಗಳ ಜನರು ಏನು ಮಾಡಬೇಕು ? ಆದ್ದರಿಂದ ಇವರಿಗೆ ತಕ್ಷಣ ಕುಡಿಯುವ ನೀರನ್ನೊದಗಿಸಲು ಈ ಕೆಲಸವನ್ನು ಕೂಡಲೇ ಪ್ರಾರಂಭ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್ — ಈ ಆರ್ಕಾವತಿ ಪ್ರದೇಶಗಳಾದ ರಾಜಾಜಿನಗರ, ಬಸವೇಶ್ವರನಗರ ಹಾಗೂ ಶ್ರೀರಾಮಪುರ ಇನ್ನೂ ಒಂದೆರಡ ಭಾಗಗಳಲ್ಲಿ ಈ ಆರ್ಕಾವತಿ ನೀರನ್ನು ಉಪಯೋಗಿಸುವಂತೆ ಜಲಮಂಡಲಿಯವರು ಮಾಡಿದ್ದಾರೆ. ಉಳಿದ ಭಾಗಗಳಿಗೆ ಕಾವೇರಿ 1 ಮತ್ತು 2ನೇ ಹಂತದ ನೀರಿಗೆ ಪಂಪುಗಳನ್ನು ಅಳವಡಿಸಿ ನೀರನ್ನು ಸರಬರಾಜು ಮಾಡುತ್ತೇವೆ. ಈರೀತಿ ಮಾಡುವುದಕ್ಕೆ ಕಾರಣ ಆರ್ಕಾವತಿಯ ನೀರು ಕಡಿಮೆಯಾಗುತ್ತಿದೆ. ಇದು ಪೂರ್ತಿ ಬತ್ತಿ ಹೋದರೂ ಹೋಗಬಹುದು. ಆದ್ದರಿಂದ ಈ ಪ್ರದೇಶಗಳಿಗೆ ನೀರನ್ನೊದಗಿಸಲು.....

ಶ್ರೀ ಎಂ. ಎಸ್. ಕೃಷ್ಣನ್.—ಏತಕ್ಕೆ ತಾವು ಈರೀತಿ ಹೇಳುತ್ತಿದ್ದೀರಿ ? I am very sorry- ತಾವು ಸುಮ್ಮನೆ ಈರೀತಿ ಹಾರಿಕೆ ಉತ್ತರವನ್ನು ಕೊಟ್ಟರೆ ಅದು ಸಾಧ್ಯವಾಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಹಾರಿಕೆ ಉತ್ತರವನ್ನು ಹೇಳುತ್ತಿಲ್ಲ. I am sorry ; I am not in the habit of doing that. There is nothing that is not known to him. I have been calling the Legislators meeting in Bangalore very frequently. You have asked for the answer ; I am giving it. You know everything.

Sri M. S. Krishnan.—That is why I am telling you.

Sri A Lakshmisagar.—Please hear me. ಈ ಒಂದು ಕೆಲಸವನ್ನು ನಾವು ಕೈಗೊಂಡಿದ್ದೇವೆ. ತಮ್ಮ ಕಳಕಳಿ ಏನೆಂದರೆ ಈ ಕೆಲಸ ನಿಧಾನವಾಗುತ್ತದೆ. ಇದರಿಂದಾಗಿ ಆ ಪ್ರದೇಶಗಳ ಜನರು ಕುಡಿಯುವ ನೀರಿಗೆ ಏನು ಮಾಡಬೇಕು ? ಆದ್ದರಿಂದ ಅದಷ್ಟು ಬೇಗ ಇದನ್ನು ಮಾಡಿ ಎಂದು ಹೇಳುತ್ತಿದ್ದೀರಿ. ನಾನು ಕೂಡ ಅದಷ್ಟು ಬೇಗನೆ ಈ ಕಾರ್ಯವನ್ನು ಮಾಡಿಸುತ್ತೇನೆಂದು ಈಗಾಗಲೇ ಹೇಳಿದ್ದೇನೆ. ಸಿರಸಿ ವೃತ್ತದಿಂದ ಮಾಗಡಿ ರಸ್ತೆ ಮೇಲ್ಮಟ್ಟದ ಜಲಾಶಯಕ್ಕೆ (ಓವರ್ ಹೆಡ್ ಟ್ಯಾಂಕ್) ಕೊಳವೆಯನ್ನು ಅಳವಡಿಸಲು ಸುಮಾರು 6 ವಾರಗಳ ಕಾಲ ಆಗಬಹುದೆಂದು ನಾನು ಹೇಳಿದ್ದೇನೆ. ಇದನ್ನು ಮಾಡಿದರೆ ನಾವು ಗೋಪಾಲಪುರ, ಕೆಂಪಾಪುರ ಮುಂತಾದ ಕೆಲವು ಪ್ರದೇಶಗಳಿಗೆ ಕೊಡತಕ್ಕ ಆರ್ಕಾವತಿ ನೀರನ್ನು ಕೊಡಬೇಕಾಗುವುದಿಲ್ಲ. ಈರೀತಿ ಉಳಿಸಿದ ನೀರನ್ನು ಮಲ್ಲೇಶ್ವರಂ,

ರಾಜಾಜಿನಗರ, ಬಿನ್ನಪೇಟೆಗಳಿಗೆ ಒದಗಿಸಲು ಸಾಧ್ಯವಾಗುತ್ತದೆ. ಈಗ ನಾವು ಏಳು 400 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕೆಲಸವನ್ನು ಪ್ರಾರಂಭಿಸಬೇಕೆಂದಿದ್ದೇವೆ, ಇದನ್ನು ಆದಷ್ಟು ಬೇಗನೆ ಮುಗಿಸಲು ಎಲ್ಲಾ ವ್ಯವಸ್ಥೆಗಳನ್ನೂ ಮಾಡುತ್ತೇವೆಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಇದರ ಜೊತೆಗೆ ಈ ತಿಂಗಳ ಕೊನೆಯವರೆಗೂ ಈಗ ಯಾವ ಪ್ರಮಾಣದಲ್ಲಿ ನೀರನ್ನು ಸರಬರಾಜು ಮಾಡುತ್ತಿದ್ದೇವು ಅದೇ ಪ್ರಮಾಣದಲ್ಲೇ ಸರಬರಾಜು ಮಾಡಲು ಸಾಧ್ಯವಿದೆ. ಇದರ ನಂತರ ಎಲ್ಲಾದರೂ ಕುಡಿಯುವ ನೀರಿಗೆ ತೊಂದರೆ ಉಂಟಾದರೆ ಆಗ ಕೊಳವೆ ಬಾವಿಗಳನ್ನು ಕೊರೆಸುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ. ಈಗಾಗಲೇ ಮಾನ್ಯ ಸದಸ್ಯರ ಕ್ಷೇತ್ರದಲ್ಲಿ 83 ಕೊಳವೆ ಬಾವಿಗಳನ್ನು ತೋಡಿಸಿದ್ದೇವೆ. ಅಲ್ಲಿ ನೀರೂ ಕೂಡ ಸಿಕ್ಕಿದೆ, ಇದರ ಜೊತೆಗೆ ಇನ್ನೂ ನೀರು ಸಾಲದು ಎಂದು ಹೇಳತಕ್ಕ ಪ್ರದೇಶಗಳಿಗೆ ಲಾರಿಗಳ ಮುಖಾಂತರ ನೀರನ್ನು ಸರಬರಾಜು ಮಾಡುವ ವ್ಯವಸ್ಥೆ ಮಾಡುತ್ತೇವೆ. ಈ ಲಾರಿಗಳು ಎಲ್ಲಿ ನಿಂತಿರುತ್ತವೆ, ಇವುಗಳ ನಂಬರ್ ಏನು, ಹಾಗೂ ದೂರವಾಣಿ ಸಂಖ್ಯೆ ಮುಂತಾದುವನ್ನೆಲ್ಲಾ ಮಾನ್ಯ ಸದಸ್ಯರಿಗೆ ತಿಳಿಸಿದ್ದೇವೆ. ಇನ್ನು 5–6 ದಿವಸದಲ್ಲಿ ಅರ್ಕಾವತಿ ಮತ್ತು ತಿಪ್ಪಗೊಂಡನಹಳ್ಳಿ ಜಲಾಶಯಗಳಿಗೆ ನೀರು ಬರುವ ನಿರೀಕ್ಷೆ ಇದೆ, ಈಬಗ್ಗೆ ನಾವೆಲ್ಲರೂ ಆ ಮಳೆರಾಯನನ್ನು ಪ್ರಾರ್ಥಿಸಿ ಆತನ ಕರುಣೆ ನಮ್ಮ ಕಡೆ ಹರಿಸುವಂತೆ ಕೇಳಿಕೊಳ್ಳೋಣ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳಿಗೆ ಹೇಳಿದರೆ ಕೋಪ ಬರುತ್ತದೆ.

1 p.m.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಸಾವಿರ ಪ್ರಶ್ನೆಗಳನ್ನು ಬೇಕಾದರೆ ಕೇಳಲಿ. ಪ್ರಶ್ನೆಗಳಿಗೆ ಉತ್ತರ ಕೊಡಲು ಸಿದ್ಧನಾಗಿದ್ದೇನೆ. ಗೊತ್ತಿದ್ದರೆ ಹೇಳುತ್ತೇನೆ, ಆದರೆ ಈರೀತಿ ಪದವನ್ನು ಬಳಸಿದರೆ ಅದಕ್ಕೆ ನಾನು ಪ್ರತಿಭಟನೆ ಮಾಡಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಇಪ್ಪತ್ತು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಸುಮಾರು 400 ಮಿಲಿ ಮೀಟರ್‌ಗಳಷ್ಟು ಕೊಳವೆಗಳನ್ನು ಅಳವಡಿಸುವ ಕೆಲಸವನ್ನು ಮಾಡುತ್ತೇವೆಂದು ಹೇಳಿರುತ್ತಾರೆ. ಇದರಿಂದ ಖಂಡಿತವಾಗಿಯೂ ರಾಜಾಜಿನಗರ ಏರಿಯಾಕ್ಕೆ ಬರಬೇಕಾದಂಥ ನೀರಿನ ಪ್ರಮಾಣದಲ್ಲಿ ಒಂದು ಹನಿಯೂ ಕೂಡ ಬರುವುದಿಲ್ಲ. ಮತ್ತೆ ಕಾವೇರಿ ನೀರನ್ನು ಮಾಗಡಿ ರಸ್ತೆಯಿಂದ ಸಿರಸಿ ವೃತ್ತಕ್ಕೆ ತರುವಂಥ ವ್ಯವಸ್ಥೆಯನ್ನು ಮಾಡಿದರೂ ರಾಜಾಜಿನಗರಕ್ಕೆ ನೀರು ಬರುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಮಾಗಡಿ ರಸ್ತೆಯ ಓವರ್ ಹೆಡ್ ಟ್ಯಾಂಕ್‌ಗೆ ಅರ್ಕಾವತಿ ನೀರನ್ನು ಹಾಯಿಸುತ್ತಿದ್ದಾರೆ. ಅದರ ಬದಲು ಸಿರಸಿ ಸರ್ಕಲ್‌ನಿಂದ ಪೈಪ್ ಮುಖಾಂತರ ಮಾಗಡಿ ರಸ್ತೆಯ ಓವರ್ ಹೆಡ್ ಟ್ಯಾಂಕ್‌ಗೆ ನೀರನ್ನು ಹಾಯಿಸಿದರೆ ನೀರು ಉಳಿಯುತ್ತದೆಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಪಂಪ್ ಮಾಡಿ ನೀರನ್ನು ಒದಗಿಸುತ್ತೇವೆಂದು ಹೇಳಿದ್ದರು. ಈವತ್ತಿನ ದಿವಸ ನೀರೇ ಇಲ್ಲ. ಇದನ್ನು ಹೇಳಿ ಸುಮಾರು ಆರು ತಿಂಗಳಾಯಿತು. ಆರು ತಿಂಗಳಿಂದ ಭೋಸ್ಟರ್ ಪಂಪ್ ಹಾಕಿ ರಾಜಾಜಿನಗರಕ್ಕೆ ಕಾವೇರಿ ನೀರನ್ನು ಹಾಯಿಸುತ್ತೇವೆಂದು ಹೇಳುತ್ತಲೇ ಇದ್ದಾರೆ. ಇದು ಒಂದು ಸಣ್ಣ ವಿಭಾಗ. ಬರತಕ್ಕಂಥ ನೀರೇ ಸರಿಯಾಗಿ ಬರುತ್ತಿಲ್ಲ. ರಾತ್ರಿಯೆಲ್ಲ ನೀರನ್ನು ಹಿಡಿದು ಇಟ್ಟುಕೊಳ್ಳಬೇಕು. ಮತ್ತೆ ಅರ್ಕಾವತಿ ಪ್ರದೇಶಗಳಾದ ರಾಜಾಜಿನಗರ, ಬಸವೇಶ್ವರ ನಗರ ಹಾಗೂ ಶ್ರೀರಾಮಪುರಗಳನ್ನು ಶಾಶ್ವತವಾಗಿ ಕಾವೇರಿ ನೀರು ಸರಬರಾಜಿನ ಚೌಕಟ್ಟಿನಲ್ಲಿ ತರಲು ಸ್ಟೇಟ್ ಎಂಡ್ ಸರ್ಕಲ್‌ನಿಂದ ಕೇತಮಾರನಹಳ್ಳಿ ಭೂಮಟ್ಟದ ಜಲಾಶಯಕ್ಕೆ 900 ಮಿ. ಮೀ. ವ್ಯಾಸದ ಕೊಳವೆಯನ್ನು ಸುಮಾರು 400 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಯೋಚಿಸಲಾಗಿದೆ ಎಂದು ಹೇಳಿದ್ದಾರೆ. ಯೋಚಿಸಲಾಗಿದೆ ಎಂದರೆ ಇನ್ನೂ ಯೋಚನೆ ಮಾಡಲಾಗುತ್ತಿದೆ ಎನ್ನುವ ಅರ್ಥವು ಬರುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಯೋಜನೆ ಎಂದರೆ ಪ್ಲಾನ್ ಎಂದು. ಯೋಚಿಸಲಾಗುತ್ತದೆಂದು ಹೇಳಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಕನ್ನಡ ನನಗೂ ಗೊತ್ತಿದೆ. ತಾವು ಪ್ರೊಫೆಸರ್ ಇರಬಹುದು. ತಾವು ಯಾವಾಗ ಕೆಲಸ ಶುರು ಮಾಡುತ್ತೀರಿ ಸ್ವಾಮಿ ? ಯೋಚಿಸಲಾಗುತ್ತದೆ, ಯೋಚನೆ ಮಾಡುತ್ತೇವೆ–ಇದೆಲ್ಲ ಏತಕ್ಕೆ ಬೇಕು. ಯಾವಾಗ ಕೆಲಸ ಪ್ರಾರಂಭ ಮಾಡುತ್ತೀರಿ, ಅಷ್ಟನ್ನು ಹೇಳಿಬಿಟ್ಟರೆ ಸಾಕು.

ಅಧ್ಯಕ್ಷರು.—ಮಾನ್ಯ ಸದಸ್ಯರಲ್ಲಿ ನಾನು ಹೇಳುವುದಾದರೂ ಇಷ್ಟೇ. ಎಲ್ಲರಿಗೂ ಮಾತನಾಡಲು ಹಕ್ಕು ಇದೆ. ತಾವು ಆವರೆ ಆಫೀಸಿಗೆ ಹೋಗಿ ಚರ್ಚೆ ಮಾಡಿ ತಮಗೆ ಏನು ಅನುಕೂಲತೆ ಮಾಡಿಕೊಳ್ಳಬೇಕೋ ಅದನ್ನು ಮಾಡಿಕೊಳ್ಳಿ. ಈಗ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದೀರಿ. ಮಾನ್ಯ

ಸಚಿವರು ಉತ್ತರವನ್ನು ಕೊಟ್ಟಿರುತ್ತಾರೆ. ಅವರಿಂದ ಹೆಚ್ಚಿನ ಉಪಯೋಗ ಪಡೆದುಕೊಳ್ಳಬೇಕಾದರೆ ತಾವು ಶಾಸಕರಿದ್ದೀರಿ, ಅವರ ಆಫೀಸಿಗೆ ಹೋಗಿ ಡಿಸ್‌ಕಸ್ ಮಾಡಿ ಏನು ಕೆಲಸ ಬೇಕಾದರೂ ಮಾಡಿಸಿಕೊಳ್ಳತಕ್ಕಂಥ ಹಕ್ಕಿವೆ.

ಶ್ರೀ ಎಂ. ಎಸ್. ಕೃಷ್ಣನ್.—ಇದು ನನ್ನದು ಒಬ್ಬನ ಪ್ರಶ್ನೆಯಲ್ಲ. ನನ್ನ ಒಬ್ಬನ ಕೆಲಸವಾಗಿದ್ದರೆ ಪ್ರೈವೇಟ್ ಆಗಿ ಕೇಳಿ ಮಾತನಾಡುತ್ತಿದ್ದೆ. ಇದು ಸಾರ್ವಜನಿಕರಿಗೆ ಸಂಬಂಧಪಟ್ಟ ಪ್ರಶ್ನೆಯಾಗಿದೆ, 30 ಲಕ್ಷ ಜನರಿಗೆ ಸಂಬಂಧಪಟ್ಟ ಪ್ರಶ್ನೆ. ಇದನ್ನು ಸಾರ್ವಜನಿಕವಾಗಿಯೂ ಕೇಳಿದ್ದೇನೆ, ಮತ್ತು ಪ್ರೈವೇಟ್ ಆಗಿಯೂ ಕೇಳಿದ್ದೇನೆ.

ಅಧ್ಯಕ್ಷರು.—ಅಷ್ಟು ಮಹತ್ವದ ವಿಷಯವಿದ್ದರೆ ಅವರ ಆಫೀಸಿಗೆ ಹೋಗಿ ಒಂದು ತಾಸು ಕುಳಿತು ಚರ್ಚೆಮಾಡಿ.

ಶ್ರೀ ಎಂ. ಎಸ್. ಕೃಷ್ಣನ್.—ಈ ಮನೆಯಲ್ಲಿ ಚರ್ಚೆ ಮಾಡುವಾಗ 900 ಮಿ. ಮಿಾಟರ್ ವ್ಯಾಸದ ಕೊಳವೆಯನ್ನು ಅಳವಡಿಸಬೇಕಾದರೆ ಸುಮಾರು 400 ಲಕ್ಷ ರೂಪಾಯಿ ಖರ್ಚು ತಗಲುತ್ತದೆಂದು ಹೇಳಿರುತ್ತಾರೆ. ಇದರಲ್ಲಿ ಆರ್ಥಿಕ ಪರಿಸ್ಥಿತಿ ವಿಚಾರ ಬರುವುದರಿಂದ ಇದನ್ನು ಪರಿಶೀಲನೆ ಮಾಡುತ್ತಾರೆಯೇ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು. 83 ಬೋರ್‌ವೆಲ್‌ಗಳನ್ನು ಹಾಕಿರುವುದು ನಿಜ. ಇದರಲ್ಲಿ 8-10 ಬೋರ್‌ವೆಲ್‌ಗಳು ಫೆಲ್ಯೂರ್ ಆಗಿರುತ್ತದೆನ್ನುವುದೂ ನಿಜವಿರುತ್ತದೆ. ಆದ್ದರಿಂದ ಇನ್ನೂ 50-100 ಕೊಳವೆ ಬಾವಿಗಳನ್ನು ಹಾಕಿಸಿಕೊಡುವ ಭರವಸೆಯನ್ನು ಕೊಡಬೇಕೆಂದು ಕೇಳುತ್ತೇನೆ. ಏತಕ್ಕೆಂದರೆ ಕೊಳವೆ ಬಾವಿಗಳನ್ನು ಜಾಸ್ತಿ ಮಾಡದಿದ್ದರೆ ಖಂಡಿತವಾಗಿಯೂ ಜನರು ಬದುಕುವುದಕ್ಕೆ ಆಗುವುದೇ ಇಲ್ಲ. ಜನರನ್ನು ಮಾನ್ಯ ಸಚಿವರ ಕಡೆಗೆ ಕರೆದುಕೊಂಡು ಬರಬೇಕಾಗುತ್ತದೆ. ಆದಕ್ಕೆ ಅವಕಾಶವನ್ನು ಕೊಡದೆ ಇನ್ನು 100 ಕೊಳವೇ ಬಾವಿಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾಗಡಿ ರಸ್ತೆಯಿಂದ ಪೈಪ್‌ಹಾಕತಕ್ಕಂಥ ಕೆಲಸವನ್ನು ಇನ್ನು ಆರು ವಾರಗಳಲ್ಲಿಯೇ ಮುಗಿಸಲು ಯೋಚಿಸಲಾಗಿದೆ ಎಂದು ಹೇಳಿದ್ದೇನೆ. ಏರಡನೆಯದಾಗಿ 400 ಲಕ್ಷ ರೂಪಾಯಿಗಳನ್ನು ವೆಚ್ಚಮಾಡತಕ್ಕಂಥ ಸಂದರ್ಭದಲ್ಲಿ ಸಂಪನ್ಮೂಲಗಳನ್ನು ಕೂಡ ಗಮನದಲ್ಲಿಟ್ಟುಕೊಳ್ಳತಕ್ಕಂಥ ಅವಶ್ಯಕತೆ ಇದೆ. ನಾಲ್ಕು ಕೋಟಿ ರೂಪಾಯಿಗಳನ್ನು ಒದಗಿಸತಕ್ಕಂಥ ಕೆಲಸ ನಾನೇ ಸ್ವತಃ ನಿಂತು ಜಲಮಂಡಲಿಗೆ ಒದಗಿಸಲಿಕ್ಕೆ ಮತ್ತು ಈ ವಿಚಾರದಲ್ಲಿ ಅವರಿಗೆ ಸಹಾಯಕನಾಗಿ ಕೆಲಸಮಾಡುತ್ತೇನೆಂದು ಹೇಳಿರುವ ವಿಚಾರವನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮೂರನೆಯದಾಗಿ ಈ ಪ್ರಶ್ನೆಯನ್ನು ಕೇಳುವುದಕ್ಕೆ ಮೊದಲು ಐದು ಬೋರ್ ವೆಲ್‌ಗಳನ್ನು ಹಾಕುವ ವ್ಯವಸ್ಥೆಯನ್ನು ಮಾಡಿದ್ದೇನೆ. ಕೆಲವು ಕಡೆ ನೀರು ದೊರೆತಿಲ್ಲವೆನ್ನುವುದು ಮಾನ್ಯ ಸದಸ್ಯರಿಗೆ ಗೊತ್ತಿರತಕ್ಕಂಥ ವಿಷಯವಾಗಿದೆ. ಆದ್ದರಿಂದ ಜಿಯೋ ಫಿಸಿಸ್ಟ್‌ನ್ನು ಕರೆದುಕೊಂಡು ಹೋಗಿ ಎಲ್ಲಿ ನೀರು ಬರುತ್ತದೆಂಬುದನ್ನು ಕಂಡು ಹಿಡಿದು ಬಾವಿಗಳನ್ನು ತೋಡಿಸಿ ನೀರನ್ನು ಒದಗಿಸತಕ್ಕಂಥ ವ್ಯವಸ್ಥೆಯನ್ನು ಮಂಡಲಿಗಳು ಮಾಡುತ್ತಿದೆ. ಬೋರ್‌ವೆಲ್‌ಗಳಲ್ಲದೆ ಬೇರೆ ಮಾರ್ಗವೇ ಇಲ್ಲ ಎನ್ನುವ ಕಡೆ ಇನ್ನೂ ಹೆಚ್ಚು ಬೋರ್ ವೆಲ್‌ಗಳನ್ನು ಕೊಡುವುದಕ್ಕೆ ಆದೇಶವನ್ನು ಕೊಡುತ್ತೇನೆ. ಆದ್ದರಿಂದ ನೀರಿನ ಬಗ್ಗೆ ಯಾವ ತೊಂದರೆಯು ಉಂಟಾಗುವುದಿಲ್ಲ. ಈಗಾಗಲೇ ಮಳೆ ಬರುವ ನಿರೀಕ್ಷೆ ಇದೆ. ಇವತ್ತೇ ಮಳೆ ಬರಬಹುದು ಅಥವಾ ನಾಳೆ ಬರಬಹುದು. ಈ ತಿಂಗಳ ಕೊನೆಯವರೆಗೂ ನೀರನ್ನು ಪೂರೈಸುವ ವ್ಯವಸ್ಥೆ ಇರುತ್ತದೆ. ಎತ್ತರವಾದ ಪ್ರದೇಶಗಳಿಗೂ ನೀರು ದೊರೆಯುತ್ತದೆ. ಆದರಲ್ಲೇನು ಸಂದೇಹವಿರುವುದಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ದಿನ ಬಿಟ್ಟು ದಿನ ನೀರನ್ನು ಒದಗಿಸುವುದಾಗಿ ತಾವೇ ಹೇಳಿದ್ದೀರಿ. ಶಾಸಕರ ಸಭೆಯನ್ನು ಕರೆದು ಪರಿಸ್ಥಿತಿ ತೀರ ಕೆಟ್ಟುಹೋಗಿದೆ, ಆದ್ದರಿಂದ ದಿನಬಿಟ್ಟು ದಿನ ನೀರನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ಸಭೆಯಲ್ಲಿ ವ್ಯಕ್ತಪಡಿಸಿದ್ದೀರಿ. ಆದರೆ ಮಲ್ಲೇಶ್ವರಂ, ರಾಜಾಜಿನಗರ ಈ ಕ್ಷೇತ್ರವನ್ನು ಮಾತ್ರ ಈರೀತಿಯ ವ್ಯವಸ್ಥೆಗೆ ಒಳಪಡಿಸುತ್ತೀರಾ ಅಥವಾ ಕೆಲವು ಕಡೆ ಹೆಚ್ಚಿಗೆ ನೀರು ಬರುತ್ತದೆ. ಅದನ್ನು ಎಲ್ಲರಿಗೂ ಹಂಚತಕ್ಕಂಥ ವ್ಯವಸ್ಥೆ ಮಾಡುತ್ತೀರಾ ? ಈ ಬಗ್ಗೆ ಏನು ತೀರ್ಮಾನ ತೆಗೆದುಕೊಳ್ಳುತ್ತೀರಿ ಅದನ್ನು ತಿಳಿಸಬೇಕೆಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ದಿನಬಿಟ್ಟು ದಿನ ನೀರನ್ನು ಒದಗಿಸತಕ್ಕಂಥ ಪ್ರಶ್ನೆ ಸದ್ಯಕ್ಕೆ ನಮ್ಮ ಮುಂದೆ ಇಲ್ಲ. ಕಾವೇರಿ ನೀರನ್ನು ಅರ್ಕಾವತಿ ವ್ಯಾಲಿಯಿಂದ ಒದಗಿಸತಕ್ಕದ್ದಕ್ಕೆ ಲಿಂಕೇಜ್ ಹಾಕಿದ್ದೇವೆ. ನೀರು ಕೂಡ ಸಪ್ಲೈ ಆಗುತ್ತಿದೆ, ಇದರಿಂದ ನಿಮ್ಮ ಕ್ಷೇತ್ರವಲ್ಲದೆ ಸುತ್ತಮುತ್ತಲ ಭಾಗಕ್ಕೂ ನೀರು ದೊರೆಯುತ್ತದೆ, ಬೆಂಗಳೂರು ಬಗ್ಗೆ ನಾನು ಸಮಗ್ರವಾಗಿ ಹೇಳುತ್ತಿದ್ದೇನೆ, ಎತ್ತರವಾದ ಪ್ರದೇಶಗಳು ಅಂದರೆ ವೆಸ್ಟ್ ಆಫ್ ಕಾರ್ಡ್‌ರೋಡ್, ಮಲ್ಲೇಶ್ವರಂ, ಶ್ರೀರಾಮಪುರಂ, ಮಾಗಡಿರಸ್ತೆ, ಉಳಿದ ಎಲ್ಲ ಪ್ರದೇಶಗಳಿಗೂ ಕಾವೇರಿ ನೀರನ್ನು ಒದಗಿಸತಕ್ಕಂಥ ಪೈಪ್‌ಗಳನ್ನು ಜೋಡಣೆಮಾಡಿ ಕಾವೇರಿ ನೀರನ್ನು

ಸರಬರಾಜು ಮಾಡುತ್ತಿದ್ದೇವೆ. ಇದೇ ಅಲ್ಲದೆ ಮಚಲಿ ಬೆಟ್ಟ, ಸಿವಿಲ್‌ಸ್ಟೇಷನ್‌ಗಳಿಗೂ ಕೂಡ ಅರ್ಕಾವತಿ ನೀರನ್ನು ಸರಬರಾಜು ಮಾಡತಕ್ಕಂಥ ಪ್ರದೇಶಗಳಿಗೆ ಕಾವೇರಿ ನೀರು ಹೋಗುತ್ತಿದೆ. 4-5 ಜಾಗಗಳನ್ನು ಬಿಟ್ಟು ಅರ್ಕಾವತಿ ನೀರನ್ನು ಬಹಳ ಎಕನಾಮಿಕಲ್ ಆಗಿ ಯೂಸ್ ಮಾಡತಕ್ಕಂಥ ಒಂದು ಯೋಜನೆಯನ್ನು ಹಾಕಿಕೊಂಡು ಕನಿಷ್ಟ ಪ್ರಮಾಣದ ನೀರನ್ನು ಸಣ್ಣ ಏರಿಯಾಗಳಿಗೆ ಸರಬರಾಜು ಮಾಡತಕ್ಕಂಥ ವ್ಯವಸ್ಥೆ ಮಾಡಿಕೊಂಡಿದ್ದೇವೆ.

334ನೇ ನಿಯಮದ ಮೇರೆಗೆ ಚರ್ಚೆ.

ಅಧ್ಯಕ್ಷರು.—ಇಂದು ನಮ್ಮ ಮುಂದೆ ಈ ನಿಯಮಾವಳಿಗೆ ಸಂಬಂಧಪಟ್ಟ ಹಾಗೆ 20 ವಿಷಯಗಳಿವೆ. ಅವುಗಳನ್ನು ಸಂಬಂಧಪಟ್ಟ ಸದಸ್ಯರು ನಿಯಮವನ್ನು ಉಲ್ಲಂಘನೆ ಮಾಡದೆ ಓದಿ ಹೇಳಬೇಕು. ಆದಕ್ಕೆ ಉತ್ತರ ಸಿದ್ಧವಿದ್ದರೆ ಮಂತ್ರಿಗಳು ಹೇಳುತ್ತಾರೆ, ಇಲ್ಲದಿದ್ದರೆ ನಾಳೆ ಹೇಳುತ್ತಾರೆ. ಇದರ ಮೇಲೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಇಲ್ಲ.

(1) ಗುಲ್ಬರ್ಗದಲ್ಲಿ ಹುಡ್ಕೊ ನೆರವಿನಿಂದ ಕಟ್ಟಡದ ಮನೆಗಳ ವಿತರಣೆ.

ಶ್ರೀ ಎಸ್. ಕೆ. ಕಾಂತಾ.—ಗುಲ್ಬರ್ಗಾ ನಗರದಲ್ಲಿ 1981ರಲ್ಲಿ ಹುಡ್ಕೋ ಸಹಾಯದಿಂದ ಬಡ ಪೂರ ಏರಡನೆ ಹಂತದಲ್ಲಿ ಮಧ್ಯಮ ಆದಾಯದ, ಕಡಿಮೆ ಆದಾಯದ ಮತ್ತು ಆರ್ಥಿಕ ದುರ್ಬಲ ವರ್ಗದವರಿಗಾಗಿ ಮನೆಗಳನ್ನು ಕಟ್ಟಿಕೊಡುವ ಯೋಜನೆಯಲ್ಲಿ ಮನೆಗಳನ್ನು ಕಟ್ಟಲಾಗಿದೆ. ಇದುವರೆವಿಗೂ ಮನೆಗಳ ಹಂಚಿಕೆ ಆಗಲಿಲ್ಲ ಮತ್ತು ಅವುಗಳ ಯೋಜನೆ ಸಮಯದಲ್ಲಿ ನಿಗದಿಮಾಡಿದ ಬೆಲೆಗಿಂತಲೂ ಶೇಕಡ 75ರಿಂದ 80ರವರೆವಿಗೂ ಹೆಚ್ಚಾಗಿದ್ದು ಅದಕ್ಕೆ ಕಾರಣ ಮತ್ತು ವಿವರಣೆಯನ್ನು ಈ ಸದನಕ್ಕೆ ತಿಳಿಸಬೇಕು ಮತ್ತು ಕಟ್ಟಡಗಳ ನಿರ್ಮಾಣದಲ್ಲಿ ತಡವಾಗಲು ಕಾರಣ ಕೂಡ ದಯಮಾಡಿ ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಸದಸ್ಯರು ಹೇಳಿರತಕ್ಕ ವಿಷಯದಲ್ಲಿ ನಾನು ಗುಲ್ಬರ್ಗಕ್ಕೆ ಹೋಗಿದ್ದಾಗ ಖುದ್ದಾಗಿ ಪರಿಶೀಲನೆ ಮಾಡಿದ್ದೇನೆ. ಕೆಲವು ಮನೆಗಳನ್ನು ಇನ್ನೂ ಹಂಚಿಲ್ಲ ; ಹಂಚುವುದಕ್ಕೆ ಸದ್ಯದಲ್ಲಿ ಕ್ರಮ ಕೈಗೊಳ್ಳುತ್ತಾರೆ. ಬೆಲೆ ಹೆಚ್ಚು ಮಾಡಿರುವುದರ ಬಗ್ಗೆ ಕೂಡ ಮಾನ್ಯ ಸದಸ್ಯರು ಹೇಳಿದ್ದಾರೆ ; ಮತ್ತು ಆ ಬಗ್ಗೆ ನನ್ನನ್ನೂ ಕೂಡ ಬೇಟಿ ಮಾಡಿದ್ದಾರೆ. ಆದಕ್ಕೆ ಎಷ್ಟು ಹಣ ವಿಚಾರ್ಜ್ ಗಿದೆ ಅಷ್ಟು ಮೊತ್ತ ಹೌಸಿಂಗ್ ಬೋರ್ಡಿನಿಂದ ತೆಗೆದುಕೊಳ್ಳುವಂತೆ ಮಾಡುತ್ತೇನೆಂದು ಭರವಸೆ ಕೊಡುತ್ತೇನೆ.

(2) ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಉಳಿತಾಯ ಯೋಜನಾ ಸರ್ಟಿಫಿಕೆಟ್ ಕೊಡುವ ಬಗ್ಗೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಸ್ವಾಮಿ, ನನ್ನ ವಿಷಯಕ್ಕೆ ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಅಧ್ಯಕ್ಷರು.—ನೀವು ಓದಿ ಹೇಳಿ. ಸರ್ಕಾರ ಅಂದರೆ ಜಂಟಿ ಜವಾಬ್ದಾರಿ ಇರುತ್ತದೆ. ಇರುವ ಮಂತ್ರಿಗಳು ಉತ್ತರಿಸುತ್ತಾರೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಶ್ರೀ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ (ನಿ) ಸಂಕೇಶ್ವರ, ಕಬ್ಬು ಪೂರೈಕೆ ಆಧಾರದಿಂದ ಸಣ್ಣ ಉಳಿತಾಯ ಯೋಜನೆಯಲ್ಲಿ ಹಣವನ್ನು ತೊಡಗಿಸಿದ ವರ್ಷದಲ್ಲಿ ಸರ್ಟಿಫಿಕೆಟ್‌ಗಳನ್ನು ಕೊಡದೆ ಇರುವುದು ಸುಮಾರು ಮೂರು ವರ್ಷದಿಂದ ಸಣ್ಣ ಉಳಿತಾಯ ಯೋಜನೆಯಲ್ಲಿ ತೊಡಗಿಸಿದ ಸುಮಾರು 20 ಲಕ್ಷ ರೂಪಾಯಿಗಳಿಗೂ ಮೆಲ್ಪಟ್ಟ ಹಣ ಕಾರ್ಖಾನೆಯಲ್ಲಿ ಬಡ್ಡಿ ರಹಿತವಾಗಿ ಉಳಿದಿದ್ದು, ಕಬ್ಬು ಬೆಳೆಗಾರರಿಗೆ ಹಾನಿ ಆಗುತ್ತಿದ್ದು ಸಣ್ಣ ಉಳಿತಾಯದ ಹಣವನ್ನು ಸರ್ಕಾರಕ್ಕೆ ಸಂದಾಯ ಮಾಡದೆ ಉಪಯೋಗಿಸುತ್ತಿರುವುದರಿಂದ ಈ ಬಗ್ಗೆ ಕೂಡಲೇ ಯೋಗ್ಯ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಸೂಚನೆ ನೀಡುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಈ ವಿಷಯ ಈಗತಾನೇ ನನ್ನ ಗಮನಕ್ಕೆ ಬಂದಿದೆ. ಇನ್ನು ಎರಡು ದಿನಗಳಲ್ಲಿ ಉತ್ತರ ತರಿಸಿಕೊಡುತ್ತೇನೆ.

(3) ಬಿಜಾಪುರ ಸಹಕಾರಿ ನೂಲಿನ ಗಿರಣಿಯಲ್ಲಿ ಮುಷ್ಕರ.

ಶ್ರೀ ಎಂ. ಎಸ್. ಕೃಷ್ಣನ್.—ಸುಮಾರು 8 ತಿಂಗಳುಗಳಿಂದ ವಿಜಾಪುರ ಸಹಕಾರಿ ನೂಲಿನ ಗಿರಣಿ ಬಂದಾಗಿದೆ. ಇದನ್ನೂ ಚಾಲೂ ಮಾಡಬೇಕೆಂದು ಕಾರ್ಮಿಕರು ಹೋರಾಡುತ್ತಾ ಬಂದಿದ್ದಾರೆ. ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿಗೆ ಸೇರಿರುವ ಕಾರ್ಮಿಕ ಸಂಘದ ಯತ್ನದಿಂದಾಗಿ ಕಾರ್ಮಿಕರು ಬೆಂಗಳೂರಿಗೆ ಬಂದು ಮುಖ್ಯ ಮಂತ್ರಿಗಳನ್ನು ಕಂಡ ನಂತರ, ಈ ಗಿರಣಿಯನ್ನು ಚಾಲೂ ಮಾಡಲು ಬೇಕಾದ ಆರ್ಥಿಕ ಸಹಾಯವನ್ನು ನೀಡುವುದಾಗಿ ಭರವಸೆ ನೀಡಲಾಯಿತು. ಮಂತ್ರಿ ಮಂಡಲವೂ ಸಹ ಇದರ ಬಗ್ಗೆ ನಿರ್ಧಾರ ಕೈಗೊಂಡು 52 ಲಕ್ಷ ರೂಪಾಯಿ ಸಹಾಯಧನ ನೀಡುವುದಾಗಿಯೂ, ಮತ್ತು